ಅಲುಮೇಲುವಿಗೆ ಬಂದ ಕಾಯಿಲೆಯ ಬಗ್ಗೆ ಅವರಿಗೆ ಹೆಚ್ಚಿನ ಮಾಹಿತಿ ಇರಲಿಲ್ಲ. ಪದೇ ಪದೇ ಕಾಡುವ ಜ್ವರ, ನಿದ್ರಾಹೀನತೆ, ಸುಸ್ತು ಇತ್ಯಾದಿಗಳಷ್ಟೇ. ಆಕೆಗೆ ಚಿಕಿತ್ಸೆ ನೀಡಿದ ವೈದ್ಯ ತಿಮ್ಮಯ್ಯನೂ ಅದನ್ನೇ ಪುನರುಚ್ಚರಿಸಿದ. ಹೃದಯಾಘಾತದಿಂದ ಸಾವು ಸಂಭವಿಸಿರಬೇಕೆನ್ನುವುದು ಆತನ ಊಹನೆ. ಜೆರ್ಮಿಯ ಕುರಿತು ಅಲುಮೇಲು ಮನೆಯಲ್ಲಿ ಏನೂ ಹೇಳಿರಲಿಲ್ಲ. ಆದರೆ ತನಗೆ ಅಲ್ಲಿ ಭಯವಾಗುತ್ತದೆ ಅಂದಿದ್ದಳಂತೆ. ತನಿಖೆ ಮುಗಿಸಿ, ನಾನು ಹಿಂದಿರುಗುವಾಗ ಸಂಜೆಯಾಗಿತ್ತು. ಕರಮಚಂದ ಹಿಂದಿರುಗಿರಲಿಲ್ಲ.

***

ಮರುದಿನ ಅಪರಾಹ್ನ ಮೂರರ ಹೊತ್ತಿಗೆ ಅನಿರೀಕ್ಷಿತ ಘಟನೆಯೊಂದು ಸಂಭವಿಸಿತು. ನಾನು ತೂಕಡಿಸುತ್ತಿದ್ದೆ. ಕರಮಚಂದ್ರ ಗಣಕ ಯಂತ್ರದಲ್ಲಿ ಮುಳುಗಿದ್ದ. ಆತನ ಚರವಾಣಿ ರಿಂಗಣ ಹೊರಡಿಸಿತು. ಕರೆ ಸ್ವೀಕರಿಸಿ ಮಾತಾಡಿದವನ ಧಾಟಿಯಿಂದಲೇ ಏನೋ ಅನಾಹುತವಾಗಿದೆ ಎಂದು ಊಹಿಸಿದೆ. 'ಈಗಲೇ ಹೋಗ್ತೀವಿ' ಅಂದಾಗಲೇ ಅದು ವಲ್ಲಮ್ಮನ ಕರೆಯಿರಬೇಕೆಂದು ಭಾವಿಸಿದೆ.

'ವಲ್ಲಮ್ಮನ ತಾಯಿ ಕರೆ ಮಾಡಿದ್ದು. ಯಾವಾಗಲೂ ಒಂದು ಗಂಟೆಗೆಲ್ಲಾ ಬರುವ ವಲ್ಲಮ್ಮ ಇನ್ನೂ ಬಂದಿಲ್ಲವಂತೆ. ನೀನೀಗ ಪೊಲೀಸ್ ಠಾಣೆಗೆ ಫೋನಿಸಿ, ವೆಲೆಂಟೈನ್ ಡಿಸೋಜನಿಗೆ ತನ್ನ ತಂಡದೊಡನೆ ಜೆರ್ಮಿಯ ಮನೆಗೆ ಬರಲು ಹೇಳು. ನಾನು ನಿನ್ನೆಯೇ ಸೂಚನೆ ನೀಡಿದ್ದೇನೆ. ಆದರೆ ಇಷ್ಟು ಬೇಗ ಆತನ ಅವಶ್ಯಕತೆ ಬರುತ್ತದೆಂದು ಎಣಿಸಿರಲಿಲ್ಲ.'

ನಾವು ತರಾತುರಿಯಲ್ಲಿ ಜೆರ್ಮಿಯ ಮನೆಯತ್ತ ಧಾವಿಸಿದೆವು. ಡಿಸೋಜನ ತಂಡ ಆಗಲೇ ಅಲ್ಲಿತ್ತು. ಕರಮಚಂದನ ಸೂಚನೆಯಂತೆ ಪೇದೆಯೊಬ್ಬ ಮೈಕಿನಲ್ಲಿ ಗೇಟು ತೆರೆಯುವಂತೆ ಜೆರ್ಮಿಗೆ ಆದೇಶಿಸಿದ. ತುಸು ಹೊತ್ತಿನ ಕಾಯುವಿಕೆಯ ನಂತರ ಸ್ವಯಂಚಾಲಿತ ಗೇಟು ತೆರೆಯಿತು. ನಾವು ಒಳಕ್ಕೆ ನುಗ್ಗಿದೆವು. ಕರೆಗಂಟೆ ಅದುಮುವ ಮುನ್ನವೇ ವಲ್ಲಮ್ಮ ಕದ ತೆರೆದಳು. ಆಕೆಯ ಮೊಗದಲ್ಲಿ ಮುಗುಳ್ನಗು.

'ವಲ್ಲಮ್ಮ, ಏನಾಯಿತು?' ಕರಮಚಂದ ಪ್ರಶ್ನಿಸಿದ.

'ಏನಿಲ್ಲ, ಸಾರ್. ನೀವೇಕೆ ಬಂದಿರಿ?'

ನನಗೂ ಗೊಂದಲ. ಕರಮಚಂದನ ಲೆಕ್ಕಾಚಾರವೇನಾದರೂ ತಲೆಕೆಳಗಾಯಿತೇ?

'ಮತ್ತೆ ಡ್ರಗ್ಸ್ ತನಿಖೆಗೆ ಬಂದಿರಾ?' ಜೆರ್ಮಿ ಲೇವಡಿ ಮಾಡಿದ. ವಲ್ಲಮ್ಮನನ್ನು ದಿಟ್ಟಿಸಿ, ಕರಮಚಂದ ಪದ ಜೋಡಿಸಿದ.

'ವಲ್ಲಮ್ಮ, ಹೆದರಬೇಡ. ಏನಾಯಿತೆಂದು ಧೈರ್ಯವಾಗಿ ಹೇಳು.'

'ಮೊನ್ನೆ ನೀವು ಇಲ್ಲಿಗೆ ಬರಲು ನಾನು ಕಾರಣ ಅಂತ ಇವರಿಗೆ ಅನುಮಾನ. ನನ್ನನ್ನು ಕೊಲ್ತೀನಿ ಅಂತ ಹೆದರಿಸುತ್ತಿದ್ದಾರೆ.'

'ಮಿ. ಜೆರ್ಮಿ, ಜಗದೀಶಚಂದ್ರ ಮುಖರ್ಜಿ ಎಲ್ಲಿ?' ಕರಮಚಂದ ಕೇಳಿದ.

'ಯಾರವನು? ನನ್ನನ್ನೇಕೆ ಕೇಳ್ತೀರಿ?'

'ಆಫ್ರಿಕಾ ಖಂಡದ ಭಯಾನಕ ತ್ಸೆ ತ್ಸೆ ನೊಣದ ಬಗ್ಗೆ ವಿಶೇಷ ಸಂಶೋಧನೆ ಮಾಡುತ್ತಿದ್ದ, ಐಸಿಎಆರ್ ಇಂಡಿಯನ್ ಕೃಷಿ ಸಂಶೋಧನಾ ಸಂಸ್ಥೆಯ ವಿಜ್ಞಾನಿ. ಎರಡು ತಿಂಗಳ ಹಿಂದೆ ರಾಜೀನಾಮೆ ನೀಡಿ ನಾಪತ್ತೆಯಾದ. ಅವನೆಲ್ಲಿ? ಸುಳ್ಳು ಹೇಳಿದರೆ ಹುಷಾರ್!' ಕರಮಚಂದ ಎಚ್ಚರಿಸಿದ.

ಬೆದರಿದ ಜೆರ್ಮಿ ಮರು ಮಾತಾಡದೆ ಪಕ್ಕದ ಕೋಣೆಗೆ ನಡೆದ. ಗೋಡೆಯಲ್ಲಿದ್ದ ಯೋಗಿಯ ಪಟದ ಕಣ್ಣನ್ನು ಅದುಮಿದಾಗ, ಅದು ಬದಿಗೆ ಸರಿದು, ಗೋಡೆಯಲ್ಲಿ ದ್ವಾರ, ಕೆಳಗೆ ಇಳಿಯಲು ಮೆಟ್ಟಿಲುಗಳು ಕಂಡವು. ಜೆರ್ಮಿ ಮೆಟ್ಟಿಲು ಇಳಿಯತೊಡಗಿದ. ನಾವೆಲ್ಲ ಹಿಂಬಾಲಿಸಿದೆವು. ನೆಲಮಾಳಿಗೆ ಒಂದು ಪ್ರಯೋಗಾಲಯದ ತರಹವಿತ್ತು. ಬಗೆಯ ಬಗೆಯ ಗಾಜಿನ ಬೋಗುಣಿಗಳು, ಮೈಕ್ರೊ ದರ್ಶಕಗಳು, ಕಮಟು ವಾಸನೆ. ಜೆರ್ಮಿ ಕ್ಯಾಬಿನ್ನಿನ ಕದ ತೆರೆದ. ಒಳಗಡೆ ಸೂಕ್ಷ್ಮದರ್ಶಕದಲ್ಲಿ ಕಣ್ಣು ಹೂಡಿದ್ದ ವ್ಯಕ್ತಿಯೊಬ್ಬ ಕತ್ತು ಹೊರಳಿಸಿ ನೋಡಿ, ಬೆಚ್ಚಿದ.

'ಮಿ. ಮುಖರ್ಜಿ, ಯಾವ ಸಂಶೋಧನೆಯಲ್ಲಿದ್ದೀರಿ?' ಕರಮಚಂದ ಕೇಳಿದಾಗ ಆತನಿಗೆ ಗಲಿಬಿಲಿ.

'ನಿಮ್ಮ ಬಗ್ಗೆ ಹೇಗೆ ಗೊತ್ತಾಯಿತೆಂದು ಆಶ್ಚರ್ಯವಾಯಿತೇ? ಬಹಳ ಸರಳ. ಅಲುಮೇಲು ನಿದ್ರೆ ಕಾಯಿಲೆಯಿಂದ ಬಳಲಿ, ಸತ್ತಳೆಂದು ತಿಳಿದಾಗಲೇ ಅದು ಆಫ್ರಿಕನ್ ಸ್ಲೀಪಿಂಗ್ ಸಿಕ್ನೆಸ್ ಇರಬೇಕೆಂದು ಊಹಿಸಿದೆ. ಇಲ್ಲಿಗೆ ಬಂದಾಗ, ನನಗೆ ಸಿಕ್ಕಿದ್ದು ಅದೇ ನೊಣ. ಅಲ್ಲಿಗೆ ನನ್ನ ಅನುಮಾನಕ್ಕೆ ಪುಷ್ಟಿ ದೊರೆಯಿತು. ಅದು ಭಾರತದಲ್ಲೇ ಇಲ್ಲ. ಹಾಗಿದ್ದರೆ ಆ ಬಗ್ಗೆ ಏನಾದರೂ ಸಂಶೋಧನೆ ನಡೆಯುತ್ತಿದೆಯೇ ಎಂದು ಬಂಗಾಳದಲ್ಲಿರುವ ಸಂಶೋಧನಾ ಸಂಸ್ಥೆಗಳಲ್ಲಿ ಹುಡುಕಾಡಿದೆ.'

'ಅದೇಕೆ ಪಶ್ಚಿಮ ಬಂಗಾಳವನ್ನೇ ಆರಿಸಿಕೊಂಡಿರಿ?' ಮುಖರ್ಜಿಯ ಪ್ರಶ್ನೆ.

'ಕೆಲವೊಮ್ಮೆ ಜೆರ್ಮಿ ಮನೆಯಲ್ಲಿ ಕಾಣಿಸುವುದೇ ಇಲ್ಲವೆಂದು ವಲ್ಲಮ್ಮ ಹೇಳಿದ್ದು ನೆಲಮಾಳಿಗೆಯ ಸೂಚನೆ ನೀಡಿತ್ತು. ಎರಡು ಮೂರು ಜನರಿಗೆ ಆಗುವಷ್ಟು ಆಹಾರ ಬೇಯಿಸುತ್ತೇನೆಂದು ವಲ್ಲಮ್ಮ ಹೇಳಿದಾಗಲೇ ಇಲ್ಲಿ ಇಬ್ಬರು ಇರಬೇಕೆಂದು ಊಹಿಸಿದೆ. ಇಗ್ಗುತ್ತಪ್ಪನ ಜಾತ್ರೆಯ ನಂತರ ಮೀನೂಟ, ಬಂಗಾಲಿ ಸಿಹಿತಿಂಡಿಗಳನ್ನು ಜೆರ್ಮಿ ತಿನ್ನತೊಡಗಿದ ಅಂದಾಗಲೇ ಇಲ್ಲೊಬ್ಬ ಬಂಗಾಳಿ ಬಂದಿದ್ದಾನೆ ಎಂದು ತರ್ಕಿಸಿದೆ. ಬಂಗಾಳಿಗೆ ಮೀನು ಬಲು ಪ್ರಿಯ. ಅದಕ್ಕೆ ಬಂಗಾಳಕ್ಕೇ ಗಮನಕೊಟ್ಟೆ. ಅಲ್ಲಿ ನಿಮ್ಮ ಬಗ್ಗೆ ತಿಳಿಯಿತು.'

'ಜಾತ್ರೆಗೂ ಮೊದಲು ಇಲ್ಲಿ ಯಾರಿದ್ದರು?' ವಲ್ಲಮ್ಮನ ಪ್ರಶ್ನೆ.

'ಅದು ಜೆರ್ಮಿಯ ತಂತ್ರ. ಮುಖರ್ಜಿ ಬಂದ ನಂತರ ಹೆಚ್ಚು ಊಟ ತಯಾರಿಸಲು ಹೇಳಿದರೆ ಅನುಮಾನ ಬರಬಹುದೆಂದು ಮೊದಲೇ ಹೆಚ್ಚು ಆಹಾರ ತಯಾರಿಸಲು ಹೇಳುತ್ತಿದ್ದಿರಬೇಕು. ಅಲ್ಲಿ ಕಾಡಿನಲ್ಲಿದ್ದ ಹಳ್ಳಕ್ಕೆ ಹೆಚ್ಚಿನ ಆಹಾರವನ್ನು ಎಸೆಯುತ್ತಿದ್ದ. ಸರಿಯಲ್ವೇ, ಜೆರ್ಮಿ?' ಜೆರ್ಮಿ ಹೌದೆಂದ.

'ನನಗೆ ಇನ್ನೊಂದು ಸಾಕ್ಷ್ಯ ಸಿಕ್ಕಿದೆ. ಇಲ್ಲಿಗೆ ಬರುವ ರಸ್ತೆಯ ಆರಂಭದ ವೃತ್ತದಲ್ಲಿದ್ದ ಸಿಸಿಟೀವಿ ಫೂಟೇಜನ್ನು ಠಾಣೆಯಲ್ಲಿ ವೀಕ್ಷಿಸಿದೆ. ಇಗ್ಗುತ್ತಪ್ಪನ ಜಾತ್ರೆಯ ಸನಿಹದ ದಿನಗಳದ್ದು. ಇದು ಡೆಡ್ ಎಂಡ್ ಆಗಿದ್ದರಿಂದ ಮತ್ತು ಇಲ್ಲಿ ಜನವಸತಿ ವಿರಳವಾದ್ದರಿಂದ ಬರುವ ವಾಹನಗಳು ಕಡಿಮೆ. ಒಂದು ದಿನ ರಾತ್ರಿ ಮೂರರ ಹೊತ್ತಿಗೆ ಬಂದ ಬಾಡಿಗೆ ಕಾರನ್ನು ಕಂಡು, ಅದರ ಚಾಲಕನಲ್ಲಿ ವಿಚಾರಿಸಿದಾಗ, ಆತ ಮೈಸೂರಿನ ಹೋಟೇಲೊಂದರಲ್ಲಿದ್ದ ಅತಿಥಿಯೊಬ್ಬನನ್ನು ಇಲ್ಲಿಗೆ ತಂದು ಬಿಟ್ಟಿದ್ದು ತಿಳಿಯಿತು. ಹೊಟೇಲಲ್ಲಿ ವಿಚಾರಿಸಿದಾಗ, ನಿನ್ನ ಹೆಸರು ಗೊತ್ತಾಯಿತು. ನಿಮ್ಮ ಉದ್ದೇಶವೇನು ಎಂಬ ತನಿಖೆಯಲ್ಲಿರುವಾಗಲೇ ಇಲ್ಲಿಗೆ ಬರುವ ಸ್ಥಿತಿ ನಿರ್ಮಾಣವಾಯಿತು. ಹೇಳಿ, ನಿಮ್ಮ ಯೋಜನೆ ಏನು?'

ಅಪ್ರತಿಭನಾದ ಮುಖರ್ಜಿ ಮೆಲ್ಲನೆ ತುಟಿ ಎರಡು ಮಾಡಿದ,

'ಸ್ಲೀಪಿಂಗ್ ಸಿಕ್ನೆಸ್ಸಿಗೆ ಮದ್ದು ತಯಾರಿಸುವ ಕಂಪೆನಿಯವರು ನಮಗೆ ಈ ನೊಣವನ್ನು ಭಾರತದ ಹವಾಮಾನಕ್ಕೆ ಒಗ್ಗುವಂತೆ ಜೆನೆಟಿಕಲಿ ಬದಲಿಸಲು ಹೇಳಿದ್ದಾರೆ. ಜೆರ್ಮಿ ಈ ಗುತ್ತಿಗೆಯನ್ನು ಪಡೆದು, ಹೇರಳ ಹಣವನ್ನು ಪಡೆದು, ನನ್ನನ್ನು ಈ ಯೋಜನೆಯಲ್ಲಿ ಸೇರಿಸಿಕೊಂಡ. ಕಳ್ಳ ಮಾರ್ಗದ ಮೂಲಕ ನೊಣಗಳನ್ನೂ ಕಂಪೆನಿಯವರು ಕಳಿಸಿದರು. ಅವುಗಳನ್ನು ಮೇಲಿನ ಕೋಣೆಯೊಂದರಲ್ಲಿ ಇರಿಸಿದ್ದೇವೆ. ಆ ನೊಣವನ್ನು ಭಾರತದಲ್ಲಿ ಬೆಳೆಸಿದರೆ, ಕಂಪೆನಿಗೆ ದೊಡ್ಡ ಮಾರುಕಟ್ಟೆ ದೊರಕಿದಂತಾಗುತ್ತದೆ. ಆದರೆ ಅದನ್ನು ನಾವಿನ್ನೂ ಮಾಡಿಲ್ಲ. ಹಾಗಾಗಿ ನಮ್ಮಿಂದ ಯಾವುದೇ ಅಪರಾಧವೂ ಘಟಿಸಿಲ್ಲ. ನೀವಿನ್ನು ಹೋಗಬಹುದು.'

'ಆದ್ರೆ ಅಲುಮೇಲುವನ್ನು ಕೊಲೆ ಮಾಡಿದ ಆರೋಪದಲ್ಲಿ ಜೆರ್ಮಿಯನ್ನು ಬಂಧಿಸಬೇಕಾಗುತ್ತದೆ.'

'ನಾನೆಲ್ಲಿ ಕೊಲೆ ಮಾಡಿದೆ?'

'ಆಕೆ ಸಾಯಲು ಕಾರಣ ತ್ಸೆ ತ್ಸೆ ನೊಣದ ಕಡಿತ.'

'ಆಕೆ ಆ ಕೋಣೆಯ ಬಾಗಿಲು ತೆರೆದದ್ದೇಕೆ? ಗಾಜಿನ ಬೋಗುಣಿಗಳಲ್ಲಿದ್ದ ಕೆಲ ನೊಣಗಳು ತಪ್ಪಿಸಿಕೊಂಡು ಕಚ್ಚಿದರೆ ನಾನು ಜವಾಬ್ದಾರನೇ? ತನ್ನ ಸಾವಿಗೆ ನೊಣದ ಕಡಿತವೆನ್ನುವುದು ಪಾಪ ಆಕೆಗೆ ಗೊತ್ತೇ ಆಗಲಿಲ್ಲ, ಏಕೆಂದರೆ ರೋಗ ಲಕ್ಷಣಗಳು ಕಾಣಿಸಿಕೊಳ್ಳುವುದು ವಾರದ ನಂತರವಷ್ಟೇ. ಯಾರಿಗೂ ಈ ರೋಗದ ಬಗ್ಗೆ ಮಾಹಿತಿ ಕೂಡ ಇಲ್ಲ.'

'ಅಪಾಯಕಾರಿಯಾದ ನೊಣವನ್ನು ಅನುಮತಿಯಿಲ್ಲದೆ ಸಾಕುವುದು ಕಾನೂನಿನ ಪ್ರಕಾರ ಅಪರಾಧ. ಇಬ್ಬರೂ ನಡೆಯಿರಿ. ನಿಮ್ಮ ಅಪರಾಧದ ಬಗ್ಗೆ ನ್ಯಾಯಾಲಯ ತೀರ್ಮಾನಿಸಲಿ.'

ವಲ್ಲಮ್ಮನ ಅನುಮಾನ ತೆಳ್ಳಗಿನ ಮನುಷ್ಯನ ಸಂಚಿಗೆ ತೆರೆ ಎಳೆದಿತ್ತು!

ಪ್ರತಿಕ್ರಿಯಿಸಿ: feedback@sudha.co.in